without any motives behind it. I verified the whole thing; I feel sorry that he should have given that information. Now that it is rectified, I think the wholething has to be closed.

MADAM SPEAKER.—I think the matter is closed.

(*ii*) re : *The Statement of the Minister for Municipal Administration on Demolition of a House in Hosahalli Extension.*

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಈ ವಿಚಾರವಲ್ಲದೆ ಎರಡನೇ ಅಲಗೇಷನ್ ಕೂಡ ಮಾಡಿದ್ದೇನೆ. ಹೊಸಹಳ್ಳಿಯಲ್ಲಿ ಕಟ್ಟಿಸಿದ್ದ ಮನೆಯನ್ನು ಒಡಸಿಹಾಕಿದ ವಿಚಾರದ ಬಗೆಗೂ ಹೇಳಿದ್ದೆ. ಲೈಸನ್ಸ್ ಕೊಡದೇ ಮನೆ ಕಟ್ಟಿದ್ದರು, ಇದನ್ನು ಒಡೆಸಿ ಹಾಕಬೇಕು ಎಂದು ಡೈರೆಕ್ಷನ್ ಕೊಟ್ಟಿದ್ದೆ ಎಂದೂ, ಇನ್ನೂ ಇತರ ವಿಚಾರಗಳನ್ನು ಮಂತ್ರಿಗಳು ಹೇಳಿದರು. ಈಗ ಇದು ಕೋರ್ಟ್ ಮುಂದೆ ಹೋಗಿದೆ. ಆ ಎಲ್ಲ ವಿಚಾರಗಳು ಮತ್ತು ಮೆರಿಟ್ಸ್ ಬಗ್ಗೆ ನಾನೇನೂ ಹೇಳಲು ಹೋಗುವುದಿಲ್ಲ.

ಅಧ್ಯಕ್ಷರು.—ಇಂದಿನ ಸಭೆ ಮುಗಿಯುವುದರೊಳಗಾಗಿ ನಾನು ಇದರ ಫೈಲನ್ನು ತರಿಸಿ ಎಲ್ಲ ವಿಚಾರಗಳನ್ನೂ ಸಭೆಯ ಮುಂದೆ ಇಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಕಾರ್ಪೊರೇಷನ್‌ನವರೇ ಲೈಸನ್ಸ್ ಕೊಟ್ಟು ಪ್ಲಾನ್ ಮಂಜೂರು ಮಾಡಿ ಕಟ್ಟಿರುವ ಮನೆಯ ಬಗ್ಗೆ ಮಂತ್ರಿಗಳು ಹೋಗಿ ಆ ಮನೆಯನ್ನು ಒಡೆಯಲು ಆರ್ಡರು ಮಾಡಿದರು ಎಂದು ಫೈರ್‌ನಲ್ಲಿ ಇದೆ. ನಿಯಮಾವಳಿಗೆ ಅನುಸಾರವಾಗಿಯೇ ಇಲ್ಲ ಮನೆಯನ್ನು ಕಟ್ಟಿರುವುದು, ಇದರ ವಿಚಾರವಾಗಿ ಇಲ್ಲಿ ಹೆಚ್ಚು ಮಾತಾಡಲು ಹೋಗುವುದಿಲ್ಲ.

ಅಧ್ಯಕ್ಷರು.—ಇದರ ಬಗ್ಗೆ ಮಂತ್ರಿಗಳು ಇಲ್ಲಿ ಹೇಳಿರುವ ಸ್ಟೇಟ್ ಮೆಂಟು ಸರಿಯಾಗಿದೆಯೇ ಇಲ್ಲವೇ ಎನ್ನುವುದಕ್ಕಾಗಿ ಇದಕ್ಕೆ ಸಂಬಂಧಪಟ್ಟ ಫೈಲುಗಳನ್ನೆಲ್ಲಾ ತರಿಸಿ ನೋಡಿದ್ದೇನೆ. ಅವೆಲ್ಲ ನನ ಹತ್ತಿರ ಬಂದಿವೆ. ಅದರಂತೆ ನೋಡುವಾಗ ಮಾನ್ಯ ಮಂತ್ರಿಗಳು ಆರ್ಡರು ಮಾಡಿದಂತೆ ಇಲ್ಲ ಮನೆಯನ್ನು ಒಡೆಸಿ ಹಾಕಿದ್ದಾರೆನ್ನುವುದು ವ್ಯಕ್ತವಾಗುತ್ತದೆ. ಇದರಮೇಲೆ ಸಂಬಂಧಪಟ್ಟವರು ಚಾರ್ಜುಷೀಟು ಹಾಕಿ ಇದು ಈಗಾಗಲೇ ಕೋರ್ಟಿನ ಮುಂದೆ ಕೂಡ ಹೋಗಿದೆ. ಇದರ ವಿಚಾರವೆಲ್ಲಾ ಮಾನ್ಯ ಸದಸ್ಯರಿಗೆ ಗೊತ್ತಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಇಲ್ಲಿ ಹೇಳಿರುವ ಆರೋಪಣೆಗಳು ಆಧಾರವಿಲ್ಲದ್ದು ಎಂದು ಮಾನ್ಯ ಮಂತ್ರಿಗಳು ಇಲ್ಲಿ ಹೇಳಿದರು. ಅದಕ್ಕಾಗಿ ನಾನು ತಮ್ಮಲ್ಲಿ ಮನವಿ ಮಾಡಿಕೊಂಡಿದ್ದು ತಾವೇ ಇದಕ್ಕೆ ಸಂಬಂಧಪಟ್ಟ ಫೈಲುಗಳನ್ನೆಲ್ಲಾ ತರಿಸಿ ತಮ್ಮ ಒಂದು ಅಭಿಪ್ರಾಯ ಕೊಟ್ಟರೆ ಇದು ನಿಜವೇ ಅಲ್ಲವೇ ಎನ್ನುವುದು ಈ ಸಭೆಗೆ ತಿಳಿಯಲು ಒಂದು ಅವಕಾಶ ಸಿಗುತ್ತದೆ ಆಗ ನನ್ನ ಹೇಳಿಕೆ ಸರಿ ಇಲ್ಲವೇ ಅಥವ ಸರಿಯಾಗಿನೆಯೇ ಎನ್ನುವುದು ತಿಳಿಯುತ್ತದೆ. ಕಾನೂನು ಬಾಹಿರವಾಗಿ ಮನೆ ಕಟ್ಟಿದ್ದರೇ ಇಲ್ಲವೇ ಎನ್ನುವುದು ಕೋರ್ಟಿನ ಮುಂದೆ ತೀರ್ಮಾನವಾಗುತ್ತದೆ, ನಾನು ಅದರ ವಿವರಗಳ ಬಗ್ಗೆ ಹೋಗುತ್ತಿಲ್ಲ. ಮಾನ್ಯ ಮಂತ್ರಿಗಳು ಅಪ್ಪಣೆ ಮೇಲೆ ಕಾರ್ಪೊರೇಷನ್‌ನವರು ಇಲ್ಲ ಮನೆ ಒಡೆದು ಹಾಕಿದ್ದಾರೆ, ಇದನ್ನು ತಾವು ಫೈಲು ತರಿಸಿ ನೋಡಿದರೆ ತಮಗೆ ವಿಷಾಂಶ ಗೊತ್ತಾಗುತ್ತದೆ.

ಅಧ್ಯಕ್ಷರು.—ಟ್ರಸ್ಟ್ ಬೋರ್ಡ್ ಸೈಟಿನ ಮೇಲೆ ಹೊಸಹಳ್ಳಿಯಲ್ಲಿ ಮನೆ ಕಟ್ಟಿದ್ದರು. ಅದನ್ನು ಕಾರ್ಪೊರೇಷನ್‌ನವರು ಒಡೆಸಿ ಹಾಕಲು ಸರಕಾರದವರು ಆರ್ಡರು ಮಾಡಿದರು ಎಂದು ಫೈಲಿನಲ್ಲಿದೆ. ಇದನ್ನು ಏಕೆ ಒಡೆದರು, ಇದರಲ್ಲಿ ಟ್ರಸ್ಟು ಬೋರ್ಡಿನವರು ಮನೆ ಕಟ್ಟಲು ಹೇಗೆ ಅವಕಾಶ ಕೊಟ್ಟರು ಎನ್ನುವುದು ಇದೆಲ್ಲಾ ಕೋರ್ಟಿಗೆ ಹೋಗಿದೆ. ಅಲ್ಲಿ ಅದು ಅಂತಿಮವಾಗಿ ತೀರ್ಮಾನವಾಗುವ ವಿಚಾರ. ಇದರ ಬಗ್ಗೆ ಆರ್ಡರು ಮಾಡಿರುವ ಫೈರ್ ನನ್ನ ಹತ್ತಿರ ಬಂದಿರುವಂತೆ ಈ ಅಂಶ ಗೊತ್ತಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಂಬಂಧಪಟ್ಟ ಮಂತ್ರಿಗಳು ಬಂದು ಇಲ್ಲಿ ವಿವರ ಕೊಡಲಿ.

ಅಧ್ಯಕ್ಷರು.—ಸಂಬಂಧಪಟ್ಟ ಇದರ ಫೈಲುಗಳೆಲ್ಲಾ ನನ್ನ ಹತ್ತಿರ ಬಂದಿವೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಇಲ್ಲಿ ಒಂದು ಹೇಳಿಕೆ ಕೊಡುತ್ತಾ, ನಾನು ಮಾಮೂಲಿನಂತೆ ಇನ್‌ಸ್‌ಪೆಕ್ಷನ್‌ಗೆ ಹೋದಾಗ ಇದು ನನ್ನ ಗಮನಕ್ಕೆ ಬಂತು. ಆಗ ಇದರ ಬಗ್ಗೆ ಕಾರ್ಪೊರೇಷನ್ ಅಧಿಕಾರಿಗಳಿಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟೆ ಎಂದು ಹೇಳಿದರು. ಮಂತ್ರಿಗಳೇ ಆರ್ಡರು ಮಾಡಿ ಒಡೆಸಿದರು ಎಂದು ಫೈಲ್‌ನಲ್ಲಿ ಇದೆ,

ಅಧ್ಯಕ್ಷರು.—ಅವರು ಆರ್ಡರು ಮಾಡಿದರು ಎಂದು ಇದೆ.

The Minister after spot inspection has ordered demolition.....

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಇದರ ಜೊತೆಯಲ್ಲಿ ಹೇಳಿದ ಇನ್ನೊಂದು ಮುಖ್ಯ ವಿಚಾರ ಎಂದರೆ ಈ ಮನೆಯ ಜೊತೆಯಲ್ಲೇ ಇನ್ನೂ 28 ಮನೆಗಳು ಇದ್ದವು. ಇದೊಂದು ಮನೆ ಮಾತ್ರ ನಿರ್ದಿಷ್ಟವಾಗಿ ಏಕೆ ಒಡೆಸಬೇಕಾಗಿತ್ತು. ಎರ್ರಾ ಮನೆಗಳನ್ನೂ ಕಾರ್ಪೊರೇಷನ್, ನಿಯಮಾವಳಿಗೆ ವಿರೋಧವಾಗಿ ಕಟ್ಟಿದ್ದರೂ ಆ ಮನೆಗಳ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಮತ್ತು ಇಲ್ಲಿ ಮಂತ್ರಿಗಳೇ ನಿಂತು ಈ ಮನೆಯನ್ನು ಒಡೆಸಿದರು ಎಂದು ಗೊತ್ತಾಗಿದೆ. ಇದು ತಪ್ಪಾಗುವುದಿಲ್ಲವೇ? ಮಾನ್ಯ ಮಂತ್ರಿಗಳು ಅವರು ಇನ್‌ಸ್‌ಪೆಕ್ಷನ್ ಮಾಡಲು ಹೋದಾಗ ಕಂಡು ಬಂತು, ಆಗ ಇದರ ಬಗ್ಗೆ ಅಧಿಕಾರಿಗಳಿಗೆ ಸೂಚನೆ ಕೊಟ್ಟೆ ಎಂದು ಇಲ್ಲಿ ಹೇಳಿದ್ದಾರೆ. ಹೀಗೆ ಇವರು ಹೇಳುವ ಹೇಳಿಕೆಗಳಲ್ಲೇ ಒಂದಕ್ಕೊಂದು ವ್ಯತ್ಯಾಸ ಇದೆ. ಹಾಗೆ ಕ್ರಮ ತೆಗೆದುಕೊಳ್ಳುವುದಿದ್ದರೆ ಅಲ್ಲರುವ ಎಲ್ಲ ಮನೆಗಳ ಮೇಲೂ ತೆಗೆದುಕೊಳ್ಳಬಹುದಾಗಿತ್ತು. ಒಂದೇ ಮನೆಯ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಹೇಳಿದ್ದು ಸರಿಯಲ್ಲ. ಫೈಲ್‌ನಲ್ಲಿಆರ್ಡರ್ ಮಾಡಿದ್ದಾರೆಂದು ತಾಪ್ಪು ಈಗ ತಾನೆ ಹೇಳಿದಿರಿ. ಆದರೆ ಮಾನ್ಯ ಮಂತ್ರಿಗಳು ಸಭೆಯಲ್ಲಿ ಹೇಳಿದ್ದೇ ಬೇರೆ. ಆ ರೀತಿ ಮಾಡಿದ್ದು ಅವರಿಗೆ ಯೋಗ್ಯವಾಗಿಲ್ಲ ಎಂಬುದೇ ನನ್ನ ಆಪಾದನೆಯಾಗಿದೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಬನವಲಿಂಗಪ್ಪನವರು ತಿಳಿಸಿದ್ದಕ್ಕೂ ಈಗ ಮಾನ್ಯ ಅಧ್ಯಕ್ಷರು ತಿಳಿಸಿದ್ದರೂ ವ್ಯತ್ಯಾಸವಿದೆ ಎಂಬುದನ್ನು ಮಾನ್ಯ ವಿರೋಧಪಕ್ಷದ ನಾಯಕರು ಎತ್ತಿ ತೋರಿಸಿದ್ದಾರೆ. ಮಾನ್ಯ ಅಧ್ಯಕ್ಷರು ಹೇಳಿದ ಪ್ರಕಾರ ಮನೆಯನ್ನು ಕೆಡವಬೇಕೆಂದು ಮಾನ್ಯ ಮಂತ್ರಿಗಳೇ ಆರ್ಡರ್ ಮಾಡಿದ್ದಾರೆಂದು ತಿಳಿದುಬಂತು. ಆದರೆ ಹಿಂದೆ ಇದೇ ಮಾನ್ಯ ಮಂತ್ರಿಗಳು ಈ ಸಭೆಗೆ ಕೊಟ್ಟ ಹೇಳಿಕೆಯೇ ಬೇರೆಯಾಗಿತ್ತು. ಇದರಿಂದಲೇ ಗೊತ್ತಾಗುತ್ತದೆ, ಈ ಸಭೆಯ ಹಕ್ಕಿಗೆ ಚ್ಯುತಿ ಬರುವ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ ಎಂಬುದು. ಅವರು ಸಭಾತಿಂದನೆ ಮಾಡಿರುವುದರಿಂದ ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ. ಅನತ್ಯ ಸಂಗತಿಯನ್ನು ಸಭೆಗೆ ತಿಳಿಸಿ ಇಡೀ ಸಭೆಯನ್ನೇ ತಪ್ಪು ದಾರಿಗೆ ಎಳೆದಿದ್ದಾರೆ. ಮಾನ್ಯ ಮಂತ್ರಿಗಳು ಸಭೆಯ ಘನತೆ ಗಾಂಭೀರವನ್ನು ಹಾಳು ಮಾಡಿರುವುದರಿಂದ ಅವರ ವಿರುದ್ಧ ಬ್ರೀಚ್ ಆಫ್ ಪ್ರಿವಿಲೇಜ್‌ಗೆ ಸೂಚನೆಯನ್ನು ಯಾವ ರೀತಿ ತರಬೇಕೋ ಆ ರೀತಿ ನಾವು ತರುತ್ತೇವೆ. ಅಧ್ಯಕ್ಷರು ಅದನ್ನು ಪರಿಗಣನೆಗೆ ತೆಗೆದುಕೊಂಡು ಅದಕ್ಕೆ ಸಾನ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri D. DEVARAJ URS.—Madam Speaker, I can't understand as to why there should be repeatation of what has been already stated. If the hon. member wants to raise the issue as a breach of privilege let him do it according to rules.

Sri C. M. ARUMUGUM.—Since the information contained in the file has been revealed by the Hon. Speaker the House is ceased of this matter. I would like to know as to what the order is—whether the order is to dismantle a particular house or in general ; secondly, how that order appear in the Corporation file ; whether that file is maintained by the Government in the Secretariat or in the Corporation ; whether the said order was communicated to the Commissioner ? These are the points on which I would like to have information. Further it would be in fitness of things to allow other hon. members to express their views on the matter. Hon. Leader of Opposition Sri Deve Gowda stated that this house was dismantled with political motive. You

have stated that the other issue with regard to Basavalingappa's house is before the Court. When the matter is before the court, to what extent, this House has a right to discuss that issue ? I want the Chair to furnish information on these points also.

ಶ್ರೀ ವಾಟಾಳ್ ನಾಗರಾಜ್.—ಇದರಲ್ಲಿ ಎರಡು ಪ್ರಶ್ನೆಗಳಿವೆ. ಹೊಸಹಳ್ಳಿಯಲ್ಲಿ ಗುಡಿಸಲುಗಳನ್ನು ಕಿತ್ತುಹಾಕಿ, ಗುಡಿಸಲುವಾಸಿಗಳು ಸತ್ಯಾಗ್ರಹ ಮಾಡಿದ್ದು ಒಂದನೆಯದಾದರೆ, ಎರಡನೆಯದು ಕಟ್ಟಿದ್ದ ಮನೆಯನ್ನು ಒಡೆಸಿಹಾಕಿದ್ದು. ಮತ್ತೊಂದು ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಏನೆಂದರೆ ಕಾರ್ಪೊರೇಷನ್‌ನಲ್ಲಿ ಯಾವ ರೀತಿ ನಿರ್ಣಯಗಳಾಗುತ್ತವೆ ಎಂಬುದನ್ನು. ರಾತ್ರಿ 8 ಗಂಟೆಯ ನಂತರ ಯಾವುದನ್ನೂ ಆಳವಾಗಿ ಅಭ್ಯಾಸ ಮಾಡದೆ ಅತುರಾತುರವಾಗಿ ಪಾಸ್ ಮಾಡಿಬಿಡುತ್ತಾರೆ. ಮೇಯರ್ ಅವರು ಕಾರ್ಪೊರೇಟರ್‌ಗಳನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂಬುದನ್ನು ಸಹ ಬೆಂಗಳೂರು ಸಿಟಿಯ ಎಂ. ಎರ್. ಎ. ಗಳು ಮುಖ್ಯ ಮಂತ್ರಿಗಳ ಹತ್ತಿರ ಹೋಗಿ ರೆಪ್ರಸೆಂಟ್ ಮಾಡಿದ್ದೇವೆ.

ಅಧ್ಯಕ್ಷರು.—ಇಲ್ಲಿ ಮೇಯರ್ ಪ್ರಶ್ನೆ ಬಂದಿಲ್ಲ. ನಿಮಗೆ ಯಾರ ಮೇಲೆ ಕೋಪ ಇದೆಯೋ ಅದಕ್ಕೂ ಈ ಹೌಸ್‌ಗೂ ಸಂಬಂಧವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಯಾವ ರೀತಿ ಸಂಬಂಧ ಇದೆ ಎಂಬುದನ್ನು ಹೇಳುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ದೇವೇಗೌಡರು ಮತ್ತು ಮಾನ್ಯ ಅರ್ಮುಗಂ ಅವರು ಮಾತನಾಡಿದ್ದಾರೆ. ಅದಕ್ಕೆ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳೋಣ.

ಶ್ರೀ ವಾಟಾಳ್ ನಾಗರಾಜ್.—ಮನೆಯನ್ನು ಒಡೆದುಹಾಕಿದ ಬಗ್ಗೆ ಮಾನ್ಯ ದೇವೇಗೌಡರ ಗಿಂತಲೂ ಹೆಚ್ಚಿನ ವಿಷಯ ನನಗೆ ಗೊತ್ತಿದೆ. ಅದರ ಬಗ್ಗೆ ಎಲ್ಲ ಅಂಕಿ ಅಂಶಗಳೂ ನನ್ನ ಹತ್ತಿರ ಇದೆ. ಅದರ ಫೈರ್‌ನ್ನು ನಾನು ನಾಳೆ ಬೇಕಾದರೆ ತರುತ್ತೇನೆ.

ಅಧ್ಯಕ್ಷರು.—ತಾವು ಎಲ್ಲವನ್ನೂ ಮಿಕ್ಸ್ ಮಾಡಿ ಚಟ್ನಿ ಮಾಡುತ್ತಿದ್ದೀರಿ. ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ನೀವು ಪಾಯಸ ಮಾಡುತ್ತಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಮುಂಚೆ ಎರಡು ವಿಷಯ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮಂತ್ರಿಗಳು ಮನೆಯನ್ನು ಒಡೆದುಹಾಕುವುದಕ್ಕೆ ಆರ್ಡರ್ ಮಾಡಿದ್ದಾರೆಂದು ತಾವು ಈಗ ಹೇಳಿದಿರಿ. ಹಿಂದೆ ಮಾನ್ಯ ಮಂತ್ರಿಗಳು ಇಲ್ಲ ಅದರ ಬಗ್ಗೆ ಹೇಳಿಕೆ ಕೊಡುತ್ತಾ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಬಾಯಲ್ಲಿ ಹೇಳಿದೆ ಎಂದು ಹೇಳಿದ್ದರು. ಆ ರೀತಿ ಬಾಯಲ್ಲಿ ಹೇಳಿದ್ದನ್ನು ಬರಹದಲ್ಲಿಯೂ ಆರ್ಡರ್ ಮಾಡಿದ್ದಾರೆಯೇ ಎಂಬುದು ಒಂದು ಪ್ರಶ್ನೆ ; ಆ ರೀತಿ ಆರ್ಡರ್ ಮಾಡುವಾಗ ಒಂದೇ ಮನೆಗೆ ಆರ್ಡರ್ ಮಾಡಿದ್ದಾರೆಯೇ ಎಂದು ಕೇಳುತ್ತೇನೆ. ಅಥವಾ ಎಲ್ಲ ಮನೆಗಳನ್ನು ಒಡೆದು ಹಾಕಿ ಎಂದು ಆರ್ಡರ್ ಮಾಡಿದ್ದಾರೆಯೇ ಎಂಬುದು ಮುಖ್ಯವಾದ ಪ್ರಶ್ನೆ. ಇನ್ನೊಂದು ಪ್ರಶ್ನೆ ಏನೆಂದರೆ ಈ ಕೇಸು ಈಗ ಕೋರ್ಟ್ ಮುಂದೆ ಇದೆ. ಆದ್ದರಿಂದ ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ Whether this action of ordering of demolition of the house is proper or not is a matter with which we are concerned.

Sri D. DEVARAJ URS.—I don't think there is need to debate upon this matter. It is not at all a big affair and we need not exercise our mind over a limited issue like this. I believe Mr. Deve Gowda wanted to point out that the allegation he made had some basis. Many a time during discussions in this House certain things are said to which we say they are right or they are wrong.

(SRI D. DEVARAJ URS)

3-30 P.M.

Sri Deve Gowda wanted to point out that a house of a Minister was constructed without a licence. The Minister said :' No—I have got authority to construct'. Now that the matter has gone to a Court, nothing can be said unless the Court orders or gives a judgement either for or against. Then we will come to know whether the person who built the house has built it without authority or with authority. Many a time applications are made and sometimes licences are not granted in time. They say that after a certain period the person has a right to build. There may be so many other circumstances. Apart from that, till the Court gives its judgement none of us are in a position to say that what the Minister has done is right or wrong. Let us leave it at that.

I may straight away say that if the hon. member or members were to hold the particular action of the Government is politically motivated, we can at best say what our motives are and try to convince them. But, still if they feel that it is politically motivated, how can I help it ? The fact does remain that there was a house constructed without licence, illegally on a plot which does not belong to a person who constructed the house. There is nothing wrong as long as the Government Order or the action is within the four corners of the rules and regulations. It was stated there are 10,000 houses in Bangalore Corporation area constructed without licence and if you demolish this house why not those 10,000 houses also. Who says No ! Legally it is correct.

ಶ್ರೀ ಎಚ್. ಡಿ. ದೇವೇಗೌಡ.—ನಾನು ಮಾಡಿದ ಆರೋಪಣೆಗೆ ಸಾಕ್ಷಿ, ಇದೆ ಎಂದಾಯಿತು. ಅನಧಿಕೃತವಾಗಿ ಕಟ್ಟಿಸಿದ ಅನೇಕ ಮನೆಗಳು ಬಿಲ್ಲಿ ಇರುವಾಗ ಅದು ಒಂದನ್ನೇ ಏತಕ್ಕೆ ಕೆಡವಿಸಿದ್ದು ?

ಶ್ರೀ ಡಿ. ದೇವರಾಜ ಅರಸ್.—ಇದು ಹೇಗಿದೆ ಎಂದರೆ ಈಗ ಒಬ್ಬ ಕಳ್ಳತನ ಮಾಡುವವನು ಪೋಲೀಸಿನವರ ಕೈಗೆ ಸಿಕ್ಕಹಾಕಿಕೊಳ್ಳುತ್ತಾನೆ. ಅವನನ್ನು ಹಿಡಿದುಕೊಂಡಾಗ ನನ್ನ ಹಾಗೆ ಕಳ್ಳತನ ಮಾಡುವವರು ಎಷ್ಟೋ ಜನ ಇದ್ದಾರೆ, ನನ್ನನ್ನೇ ಏತಕ್ಕೆ ಹಿಡಿದುಕೊಂಡಿರಿ ಎಂದು ಹೇಳಿದ ಹಾಗಾಯಿತು.

ಶ್ರೀ ಎಚ್. ಡಿ. ದೇವೇಗೌಡ.—ಇತರೆ ಮುಖ್ಯ ಮಂತ್ರಿಗಳೇ, ತಾವು ತಮ್ಮ ಸಹೋದ್ಯೋಗಿಗಳು ಮಾಡತಕ್ಕಂಥಾ ತಪ್ಪನ್ನು ಸಮರ್ಥನೆ ಮಾಡಬೇಡಿ. ತಮ್ಮ ಸಹೋದ್ಯೋಗಿಗಳಿಗೆ ಈ ರೀತಿ ವ್ಯವಹಾರಮಾಡುವುದನ್ನು ಇನ್ನು ಮುಂದಾದರೂ ನಿಲ್ಲಿಸಿ ಎಂದು ಹೇಳಿ. ಸರ್ಕಾರ ಕೈಗೊಳ್ಳುವ ಕ್ರಮ ಸಾಮೂಹಿಕವಾಗಿರಬೇಕೇ ಹೊರತು ಯಾವುದೇ ವ್ಯಕ್ತಿಯ ದೃಷ್ಟಿಯಿಂದ ನಿರ್ಣಯ ತೆಗೆದುಕೊಳ್ಳುವುದು ಯೋಗ್ಯವಲ್ಲ. ಈ ಕೊನಹಳ್ಳಿಯ ಮನೆಗೆ ಸಂಬಂಧಪಟ್ಟ ಫೈಲನ್ನು ಮಂತ್ರಿಗಳು ತರಿಸಿ ಅದನ್ನು ಒಡೆಯಬೇಕೆಂದು ಆರ್ಡರ್ ಮಾಡಿರುವುದು ಸರಿಯಲ್ಲ. ಮತ್ತು ಯೋಗ್ಯವಾದದ್ದಲ್ಲ. ಕಾನೂನು ರೀತ್ಯಾ, ಮತ್ತು ವ್ಯವಹಾರ ದೃಷ್ಟಿಯಿಂದ ಇದು ಯೋಗ್ಯವಲ್ಲ. ಆ ಮನೆಯ ಮಾಲೀಕನ ಮೇಲೆ ಆಕ್ರೋಶ ಇಟ್ಟುಕೊಂಡು ಮಂತ್ರಿಗಳು ಆ ರೀತಿ ಮಾಡಿದ್ದಾರೆ. ಆ ರೀತಿ ಮಂತ್ರಿಗಳು ಮಾಡಿದ್ದನ್ನು ಸಮರ್ಥನೆ ಮಾಡುವ ದೃಷ್ಟಿಯಿಂದ ಹೇಳುವುದಾದರೆ ನಾನು ಅದನ್ನು ಮಾನ್ಯ ಮುಖ್ಯ ಮಂತ್ರಿಗಳಿಗೇ ಬಿಡುತ್ತೇನೆ. ಈ ರೀತಿ ಮಾಡುವುದರಿಂದ ಗೌರವ ಬರುವುದಿಲ್ಲ. ಇದು ಸರ್ಕಾರಕ್ಕೂ ಭೂಷಣವಲ್ಲ. ಇದರ ತೀರ್ಮಾನವನ್ನು ಜನತೆಯು ಮಾಡುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಈಗ ನನ್ನ ಒಂದು ಸಲಹೆ ಏನೆಂದರೆ ಕಾರ್ಪೊರೇಷನ್‌ನಲ್ಲಿ ಮನೆಯ ಪ್ಲಾನ್ ಸ್ಯಾಂಕ್ಷನ್ ಮಾಡಬೇಕಾದರೆ ಆ ಪ್ಲಾನಿನ ಒಂದು ನಕಲನ್ನ, ಕಾರ್ಪೊರೇಷನ್ ಆಫೀಸಿನಲ್ಲಿ ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಕಾರ್ಪೊರೇಷನ್‌ನವರು ಪ್ಲಾನನ್ನು ಮಂಜೂರು ಮಾಡಿ ಮಾನ್ಯ ಮಂತ್ರಿಗಳಿಗೆ ಕೊಟ್ಟಂತಹ ಪ್ಲಾನಿನ ನಕಲು ಮಂತ್ರಿಗಳ ಹತ್ತಿರ ಇದೆ. ಅದನ್ನೂ ಮತ್ತು ಕಾರ್ಪೊರೇಷನ್‌ನಲ್ಲಿ ಇರುವ ಅವರ ಮನೆಯ ಪ್ಲಾನಿನ ನಕಲನ್ನು ತಾಳೆ ನೋಡಬಹುದು.

ಶ್ರೀ ಡಿ. ದೇವರಾಜ ಅರಸ್.—ಅದನ್ನು ಮಾಡುವುದಕ್ಕಾಗುವುದಿಲ್ಲ. When the matter is before the court how can I do that? We shall not discuss this at all. Anything said here might amount to *sub judice*. So, let us not discuss about that point.

ಅಧ್ಯಕ್ಷರು.—ಶ್ರೀಮಾನ್ ದೇವೇಗೌಡರು ತಮ್ಮ ಅಪಾದನೆಗಳಿಗೆ ಸಂಬಂಧಿಸಿದ ಫೈಲನ್ನು ತರಿಸಿನೋಡಿ ಎಂದು ಹೇಳಿದ್ದರು. ಅವರು ಹೇಳಿದ ಹಾಗೆ ಆ ಫೈಲನ್ನು ತರಿಸಿನೋಡಿ ಆ ಇನ್‌ಫರ್‌ಮೇಷನ್ ಅನ್ನು ನಾನು ಹೇಳಿದೆ. I cannot go further than this, I close this matter at this stage.

Ruling of the Speaker

re: *Notice of a Question of Privilege of Sri Vatal Nagaraj over the Mayor Bangalore City Corporation*

ಅಧ್ಯಕ್ಷರು.—ಜೂನ್ ತಿಂಗಳು 30ನೆಯ ತಾರೀಖು ಶ್ರೀ ಮಾನ್ಯ ವಾಟಾಳ್ ನಾಗರಾಜ್ ಅವರು ಬೆಂಗಳೂರು ಸಿಟಿ ಕಾರ್ಪೊರೇಷನ್ ಸಭೆಯಲ್ಲಿ ಈ ಸಭೆಯಲ್ಲಿ ನಡೆದಂತಹ ಪ್ರೊಸೀಡಿಂಗ್ಸ್ ಬಗ್ಗೆ ಮಾತನಾಡಿದ್ದರು, ಆದ್ದರಿಂದ ಅದು ಪ್ರಿವಿಲೇಜ್ ಪ್ರಶ್ನೆ ಆಗುತ್ತದೆ ಎಂದು ಒಂದು ಪ್ರಿವಿಲೇಜ್‌ಮೋಷನ್ ಕಳುಹಿಸಿದ್ದರು. ಮತ್ತು ಕಾರ್ಪೋರೇಷನ್ ಸಭೆಯಲ್ಲಿ ನಡೆದಂತಹ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ಟೇಪ್ ರೆಕಾರ್ಡನ್ನು ತರಿಸಿ ನೋಡಿ ಎಂದು ಹೇಳಿದ್ದರು. ಅದರಂತೆ ನಾವು ಆ ಟೇಪ್‌ರೆಕಾರ್ಡನ್ನು ತರಿಸಿ ಅದನ್ನು ಹೆಲ್ಡ್ ಮಾಡಿ ನಾನು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಇನ್ನು ಕೆಲವು ಮಾನ್ಯ ಸದಸ್ಯರು ಅದನ್ನು ಕೇಳಿದೆವು. ಅಲ್ಲದೆ ಕಾರ್ಪೊರೇಷನ್ ಸಭೆಯಲ್ಲಿ ನಡೆದ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ಪ್ರೊಸೀಡಿಂಗ್ಸ್ ಅನ್ನು ಕೂಡ ತರಿಸಿ ನೋಡಿದೆವು. ಈ ಸಭೆಗೆ ರಿಪ್ಲೆಕ್ಟ್ ಆಗತಕ್ಕಂಥಾ ಒಂದು ಸ್ಟೇಟ್‌ಮೆಂಟ್ ಕೂಡ ಅದರಲ್ಲಿ ಇಲ್ಲ, ಆದ್ದರಿಂದ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಕಳುಹಿಸಿದ ಹಕ್ಕುಬಾಧ್ಯತಾ ನಿರ್ಣಯವನ್ನು ನಾನು ತಳ್ಳಿಹಾಕಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಈ ಸಭೆಯಲ್ಲಿ ಮಾನ್ಯ ಸದಸ್ಯರು ಯಾರಾದರೂ ಮಾತನಾಡಿದ ಭಾಷಣದ ಮೇಲೆ ಬೇರೆ ಯಾವುದೇ ಸಭೆಯಲ್ಲಿ ಈ ಭಾಷಣವನ್ನು ತಿರಸ್ಕರಿಸಿ ಮಾತನಾಡಬಹುದೇ ? ಟೀಕೆ ಮಾಡಬಹುದೇ ? ಈ ಸಭೆಯ ಸದಸ್ಯರ ಮೇಲೆ ಆರೋಪಣೆ ಮಾಡುತ್ತಾರೆ. ಅವರು ಆ ರೀತಿ ಟೀಕೆ ಮಾಡಬಹುದೇ ಹೇಗೆ, ಈ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ಈ ಬಗ್ಗೆ ಬೇಕಾದಷ್ಟು ರೂಲಿಂಗ್‌ಗಳು ಇವೆ. ಬೇಕಾದರೆ ತರಿಸಿ ಕೊಡುತ್ತೇನೆ. ತಾವು ಅದನ್ನು ಓದಿಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಈಗ ತಾವು ಹೇಳಿದಿರಿ ಈ ಮನೆಯನ್ನು ಕೆಡವಿಸಲು ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರು ಆರ್ಡರ್ ಮಾಡಿದ್ದರು ಎಂದು. ಆವರೆ ಈ ಹಿಂದೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಸವಲಿಂಗಪ್ಪನವರು ಈ ಸಂಬಂಧದಲ್ಲಿ ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ಕೊಟ್ಟಾಗ ಅವರು ಆರ್ಡರು ಮಾಡಿದಂಥಾದ್ದನ್ನು ಈ ಸದನದಲ್ಲಿ ಹೇಳಲಿಲ್ಲ. ಅದನ್ನ ಅವರು ಮುಚ್ಚಿಡಲು ಪ್ರಯತ್ನ ಮಾಡಿದರು. ಆದ್ದರಿಂದ ಇದು ಈ ಸಭೆಯ ಹಕ್ಕಿಗೆ ಚ್ಯುತಿ ಬಂದಿದೆ.